ಹೂದಾನಿಯೊಂದನ್ನು ಒಡೆದು ಹಾಕಿದ್ದಾರೆ! ಅವ್ನೀಗ ಬರಬಹುದು."

"ತಂಗರಾಜು, ಮೊದ್ಲು ಪೊಲೀಸಿಗೆ ಹೇಳಿ. ಅವ್ರು ತಮ್ಮ ಕೆಲ್ಸ ಮಾಡಲಿ." ಕರಮಚಂದ ಸಲಹೆ ನೀಡಿದ.

"ಒಂದು ವಿಷ್ಯ ನನ್ಗೆ ಅರ್ಥ ಆಗ್ತಾ ಇಲ್ಲ... ಸ್ಯಾಮುಯೆಲ್ ಹೂದಾನಿ ಕದ್ಕೊಯ್ಯದೆ ಅದನ್ನು ಮುರಿದು ಹಾಕಿದ್ಯಾಕೆ?" ತಂಗರಾಜು ಅನುಮಾನ ವ್ಯಕ್ತಪಡಿಸಿದ.

"ಅದು ಎಷ್ಟು ದೊಡ್ಡದಿತ್ತು, ತಂಗರಾಜು? ಹೊತ್ಕೊಯ್ಯುವ ಯತ್ನದಲ್ಲಿ ಕೈ ಜಾರಿ ಬಿದ್ದಿರಬಹುದೆ?" ಪ್ರಶ್ನೆ ಮಾಡಿದವನು ನಾನು.

"ಸುಮಾರು ಒಂದೂವರೆ ಅಡಿ ಎತ್ತರದ್ದು. ಸಾಧಾರಾಣ ತೂಕ ಇತ್ತು. ಹೊತ್ತುಕೊಂಡು ಹೋಗೋದು ಸುಲಭ ಏನೂ ಅಲ್ಲ."

"ತಂಗರಾಜು, ನಾವೊಮ್ಮೆ ನಿಮ್ಮಲ್ಲಿಗೆ ಬರಬೇಕು. ಅದು ಬಹಳಷ್ಟು ಕತೆ ಹೇಳ್ತದೆ." ಕರಮಚಂದ ತುಟಿ ಬಿಚ್ಚಿದ.

"ಬನ್ನಿ ಸಾರ್, ಈಗ್ಲೇ ಹೋಗೋಣವೆ? ಪೊಲೀಸಿಗೆ ಫೋನು ಮಾಡಿ ಬರೋಕೆ ಹೇಳ್ಲಾ?"

"ತಂಗರಾಜು, ನೀನು ಪೊಲೀಸ್ ಕರೆದುಕೊಂಡು ಹೋಗು. ಅರ್ಧ ತಾಸಿನಲ್ಲಿ ನಾವಲ್ಲಿ ಇರ್ತೇವೆ."

ತಂಗರಾಜು ಹೋದ ನಂತರ ಬಹಳ ಹೊತ್ತು ಕರಮಚಂದ ಯಾವುದೋ ಗಹನವಾದ ಚಿಂತನೆಯಲ್ಲಿ ಮುಳುಗಿದ್ದ. ಅವನೆದುರು ಲಾಪ್ ಟಾಪ್ ತೆರೆದುಕೊಂಡಿತ್ತು.

"ಬಿದ್ದಪ್ಪ, ನಾವೀಗ ತಂಗರಾಜು ಮನೆಗೆ ಹೋಗುವ. ಅಲ್ಲಿಂದ ಅಗತ್ಯ ಬಿದ್ದರೆ, ಪೊನ್ನಪ್ಪನಲ್ಲಿಗೆ. ಅಂದ ಹಾಗೆ, ನಿನ್ಗೆ ಜೋಡು ಭಗವತಿ ದೇವಾಲಯ ಎಲ್ಲಿದೆ ಅಂತ ಗೊತ್ತೆ?"

"ಸರಿಯಾಗಿ ನೆನಪಿಲ್ಲ. ವಿರಾಜಪೇಟೆ ಮೈಸೂರು ರಸ್ತೆಲಿ, ಬಿಟ್ಟಂಗಳ ಆದ ನಂತ್ರ, ಬಿ. ಶೆಟ್ಟಿಗೇರಿ ರಸ್ತೆಯಲ್ಲಿ ಅದರ ಫಲಕ ನೋಡ್ದ ನೆನಪು. ಅದ್ಯಾಕೀಗ?"

ನಾನು ಸೋಜಿಗದಿಂದ ವಿಚಾರಿಸಿದೆ. ಕರಮಚಂದ ಮಾರುತ್ತರಿಸುವ ಗೋಜಿಗೆ ಹೋಗಲಿಲ್ಲ.

ತಂಗರಾಜುವಿನದ್ದು ಮಧ್ಯಮವರ್ಗದವರ ಸಾಧಾರಣ ಮನೆ. ಹಾಗಿದ್ದರೂ ಪ್ರಾಚೀನ ಕಲಾಕೃತಿಗಳಲ್ಲಿ ಅವನ ಆಸಕ್ತಿ ನಿಜಕ್ಕೂ ಅಭಿನಂದನೀಯ ಅಂತನ್ನಿಸಿತು. ಆಗಲೇ ಅಲ್ಲಿ ಪೊಲೀಸ್ ಜೀಪು ನಿಂತಿತ್ತು. ಒಂದಿಷ್ಟು ಕುತೂಹಲಿಗರು ಅಲ್ಲಿ ಜಮಾಯಿಸಿದ್ದರು. ನಮ್ಮನ್ನು ಕಂಡು ತಂಗರಾಜುವಿನ ಮೊಗದಲ್ಲಿ ನಗೆ ಅಗಲವಾಯಿತು.

"ಇದೇ ಕೋಣೆ ಸಾರ್. ಇಲ್ನೋಡಿ, ಕಿಟಕಿಯ ಸರಳು ಬಗ್ಗಿಸಿರೋದು... ಕೋಣೆ ತುಂಬಾ ಪಿಂಗಾಣಿ ಚೂರುಗಳು."

ಕರಮಚಂದನ ಕೈಯಲ್ಲಿ ಭೂತಗನ್ನಡಿಯಿತ್ತು. ಅಂಗುಲ ಅಂಗುಲವನ್ನೂ ಅಳೆಯುವಂತೆ ನೋಡುತ್ತಿದ್ದ.

"ಇದು ಕೈ ಜಾರಿ ಬಿದ್ದಂತಿಲ್ಲ. ಬೇಕೆಂದೇ ಎಸೆದಂತಿದೆ..." ನಾನು ಹೂದಾನಿಯ ಅವಶೇಷಗಳನ್ನು ವೀಕ್ಷಿಸುತ್ತಾ ಶಂಕೆ ವ್ಯಕ್ತಪಡಿಸಿದೆ.

"ಬಿದ್ದಪ್ಪ, ನೀನೀಗ ಪತ್ತೇದಾರಿಕೆಯಲ್ಲಿ ಪಳಗುತ್ತಾ ಇದ್ದೀ! ನೀನು ಹೇಳಿದ್ದು ಸರಿ. ಕೈಜಾರಿ ಬಿದ್ದಿದ್ದರೆ, ಈ ರೀತಿ ಹುಡಿಯಾಗುವ ಸಾಧ್ಯತೆಯೇ ಇಲ್ಲ. ಇದು ಬಲವಾಗಿ ನೆಲಕ್ಕೆ ಘಟ್ಟಿಸಿದಂತಿದೆ. ತಂಗರಾಜು, ನಿನ್ಗೆ ಸಪ್ಪಳ ಕೇಳಲಿಲ್ವೆ?"

"ಕೇಳ್ತು. ನಾನು ಗಡಬಡಿಸಿ ಎದ್ದು ಬಂದೆ. ಆಗ ಒಬ್ಬ ಇದೇ ಕಿಟಕಿಯಲ್ಲಿ ತೂರಿ ಹೋದದ್ದು